# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ಆವರಣ,
ಎನ್. ಆರ್. ವೃತ್ತ, ಬೆಂಗಳೂರು-560002.

ಸಂಖ್ಯೆ:ಆ/ಪಿಆರ್/ /19-20 ದಿನಾಂಕ: 25.03.2020

## ಸುತ್ತೋಲೆ

**ವಿಷಯ:-** **ರಾಜ್ಯದಲ್ಲಿ ಕೋವಿಡ್-2019 ತುರ್ತು ಪರಿಸ್ಥಿತಿ ನಿಭಾಯಿಸುವ ನಿಟ್ಟಿನಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಅಪಾರ್ಟ್‌ಮೆಂಟ್ಸ್/ಲೇಔಟ್‌ಗಳಲ್ಲಿ ಸಾಮಾಜಿಕ ಅಂತರವನ್ನು(Social Distancing) ಕಾಯ್ದುಕೊಳ್ಳಲು ಹಾಗೂ ಇತರರಿಂದ ಪ್ರತ್ಯೇಕವಾಗಿರುವುದರ(Quarantine) ಕುರಿತಂತೆ ಸಾರ್ವಜನಿಕರ ಹಿತದೃಷ್ಟಿಯಿಂದ ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು.**

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-2019 (ನೋವೆಲ್ ಕರೋನಾ ವೈರಸ್) ಸೋಂಕು ವೈರಾಣು ರಾಜ್ಯದಲ್ಲಿಯೂ ಕಾಣಿಸಿಕೊಂಡಿರುವುದರಿಂದ, ಈ ಸೋಂಕು ಹರಡುವುದನ್ನು ತಡೆಗಟ್ಟುವುದು ಅತಿ ಅವಶ್ಯವಾಗಿರುತ್ತದೆ. ರಾಜ್ಯದಲ್ಲಿ ಕೋವಿಡ್-2019 ತುರ್ತು ಪರಿಸ್ಥಿತಿ ನಿಭಾಯಿಸುವ ನಿಟ್ಟಿನಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಅಪಾರ್ಟ್‌ಮೆಂಟ್ಸ್/ಸಂಕೀರ್ಣಗಳು/ಲೇಔಟ್‌ಗಳಲ್ಲಿ ಸಾಮಾಜಿಕ ಅಂತರವನ್ನು(Social Distancing) ಕಾಯ್ದುಕೊಳ್ಳಲು ಹಾಗೂ ಇತರರಿಂದ ಪ್ರತ್ಯೇಕವಾಗಿರುವುದರ(Quarantine) ಕುರಿತಂತೆ ಸಾರ್ವಜನಿಕರ ಹಿತದೃಷ್ಟಿಯಿಂದ ಕೈಗೊಳ್ಳಬಹುದಾದ ಮುಂಜಾಗ್ರತಾ ಕ್ರಮಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಈ ಕೆಳಕಂಡ ಅಗತ್ಯ ಕಟ್ಟುನಿಟ್ಟಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

- ಎಲ್ಲಾ ಅಪಾರ್ಟ್‌ಮೆಂಟ್ಸ್/ಸಂಕೀರ್ಣಗಳು/ಲೇಔಟ್‌ಗಳಲ್ಲಿ ಕಡ್ಡಾಯವಾಗಿ ಅಗತ್ಯ ಸೋಂಕು ನಿವಾರಣಾ ಮಿಶ್ರಣವನ್ನು ಸ್ಪ್ರೇ ಹಾಗೂ ಧೂಮೀಕರಣ ಮಾಡಲು ಕ್ರಮವಹಿಸುವುದು.
- ಎಲ್ಲಾ ಒಳಬರುವ ಹಾಗೂ ಹೊರ ಹೋಗುವ ಸಾರ್ವಜನಿಕರಿಗೆ ಲಭ್ಯವಾಗುವಂತೆ ಹ್ಯಾಂಡ್ ಸ್ಯಾನಿಟೈಸರ್/ಸೋಪ್ ಸಲ್ಯೂಷನ್‌ನ್ನು ಒದಗಿಸುವುದು ಹಾಗೂ ಸದರಿ ಹ್ಯಾಂಡ್ ಸ್ಯಾನಿಟೈಸರ್/ಸೋಪ್ ಸಲ್ಯೂಷನ್‌ನ್ನು ಸಾರ್ವಜನಿಕರು ಕೈ ಸ್ವಚ್ಛವಾಗಿರಿಸುವಂತೆ ಬಳಸಲು ಕ್ರಮವಹಿಸುವುದು ಹಾಗೂ ಖಾತರಿಪಡಿಸಿಕೊಳ್ಳುವುದು.
- ಎಲ್ಲಾ ಅಪಾರ್ಟ್‌ಮೆಂಟ್ಸ್/ಸಂಕೀರ್ಣಗಳು/ಲೇಔಟ್‌ಗಳಲ್ಲಿ ಒಳಬರುವ ಸಾರ್ವಜನಿಕರ ಆರೋಗ್ಯದ ದೃಷ್ಠಿಯಿಂದ ಕಡ್ಡಾಯವಾಗಿ ಥರ್ಮಲ್ ಸ್ಕ್ಯಾನರ್ಸ್ ಮೂಲಕ ತಪಾಸಣೆಗೆ ಒಳಪಡಿಸಲು ಕ್ರಮವಹಿಸುವುದು.
- ಸಾರ್ವಜನಿಕರಿಗೆ ಜ್ವರ, ಶೀತ, ಕೆಮ್ಮು ಇತರೆ ಲಕ್ಷಣಗಳು ಕಂಡು ಬಂದಲ್ಲಿ ಕೂಡಲೇ ಆರೋಗ್ಯ ತಪಾಸಣೆಯನ್ನು ಮಾಡಿಸಿ ಅಗತ್ಯ ಚಿಕಿತ್ಸೆಗೆ ಒಳಪಡಿಸುವುದು.
- ಸಾರ್ವಜನಿಕರು ಸುರಕ್ಷಿತ ಧಿರಿಸುಗಳನ್ನು ಧರಿಸುವ ಮೂಲಕ ಪರಸ್ಪರರ ಮಧ್ಯ ಕನಿಷ್ಠ ಭೌತಿಕ ಅಂತರವನ್ನು ಕಾಯ್ದುಕೊಳ್ಳುವಂತೆ ಎಚ್ಚರ ವಹಿಸಲು ಅರಿವು ಮೂಡಿಸುವುದು.
- ಅಪಾರ್ಟ್‌ಮೆಂಟ್ಸ್/ಸಂಕೀರ್ಣಗಳು/ಲೇಔಟ್‌ಗಳಲ್ಲಿ ಕೆಲಸ ಮಾಡುವ ಎಲ್ಲಾ ಕಾರ್ಮಿಕರು ತಮ್ಮ ಕರ್ತವ್ಯದ ಅವಧಿಯಲ್ಲಿ ಗ್ಲೌಸ್, ಮಾಸ್ಕ್ ಮತ್ತು ಶೂ ಮುಂತಾದ ಸುರಕ್ಷಾ ಧಿರಿಸುಗಳನ್ನು ಕಡ್ಡಾಯವಾಗಿ ಧರಿಸುವುದು ಹಾಗೂ ಕೈಗಳಿಗೆ ಸೋಂಕು ತಗುಲದಂತೆ ಹ್ಯಾಂಡ್ ಸ್ಯಾನಿಟೈಸರ್/ಡೆಟಾಲ್‌ನ್ನು ಆಗಾಗ್ಗೆ ಬಳಸುವುದು.
- ಅಪಾರ್ಟ್‌ಮೆಂಟ್ಸ್/ಸಂಕೀರ್ಣಗಳು/ಲೇಔಟ್‌ಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಹಾಕದೇ ಹಸಿ/ಒಣ/ಸ್ಯಾನಿಟರಿ ಮತ್ತು ಬಯೋ ಮೆಡಿಕಲ್ ತ್ಯಾಜ್ಯವನ್ನು ಪ್ರತ್ಯೇಕವಾಗಿ ಬೇರ್ಪಡಿಸಿ, ಸ್ಯಾನಿಟರಿ ಮತ್ತು ಬಯೋ ಮೆಡಿಕಲ್ ತ್ಯಾಜ್ಯವನ್ನು

Scanned with CamScanner

ಪ್ರತ್ಯೇಕ ಪೇಪರ್ ಅಥವಾ Eco friendly ಚೀಲದಲ್ಲಿರಿಸಿ Dust bin ನಲ್ಲಿ ಹಾಕುವುದು ಹಾಗೂ ಬಿಬಿಎಂಪಿ/Bulk Waste vendor ಸಿಬ್ಬಂದಿಗಳಿಗೆ ನೀಡುವುದು.

- ಅಪಾರ್ಟ್‌ಮೆಂಟ್ಸ್/ಸಂಕೀರ್ಣಗಳು/ಲೇಔಟ್‌ಗಳಲ್ಲಿರುವ ಈಜುಕೊಳ (ಸ್ವಿಮ್ಮಿಂಗ್ ಫೂಲ್), ಜಿಮ್, ಕ್ಲಬ್ ಹೌಸ್, ಪಾರ್ಕ್ ಮತ್ತು ಆಟಪಾಠದ/ಮನರಂಜನಾ ಸ್ಥಳಗಳನ್ನು ಸರ್ಕಾರದ ಆದೇಶದ ಪ್ರಕಾರ ಕಡ್ಡಾಯವಾಗಿ ಮುಂದಿನ ಆದೇಶದವರೆಗೆ ಉಪಯೋಗಿಸದಂತೆ ಕ್ರಮವಹಿಸುವುದು.

ಮೇಲ್ಕಂಡ ಎಲ್ಲಾ ಸೂಚನೆಗಳು ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಅಪಾರ್ಟ್‌ಮೆಂಟ್ಸ್/ಸಂಕೀರ್ಣಗಳು /ಲೇಔಟ್‌ಗಳಿಗೆ ಅನ್ವಯವಾಗುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಸದರಿ ವಿಷಯದಲ್ಲಿ ಉದಾಸೀನತೆ ತೋರಿದಲ್ಲಿ ನಿರ್ದಾಕ್ಷಿಣ್ಯವಾಗಿ ಕಟ್ಟು ನಿಟ್ಟಿನ ಕ್ರಮ ಜರುಗಿಸಲಾಗುವುದು.

ಬಿ.ಹೆಚ್. ಅನಿಲ್ ಕುಮಾರ್ 24/3/2020
ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ರವರಿಗೆ,</u>

1. ವಲಯಗಳ ಜಂಟಿ ಆಯುಕ್ತರು.
2. ವಲಯಗಳ ಅಧೀಕ್ಷಕ ಅಭಿಯಂತರರು.
3. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ)
4. ಆರೋಗ್ಯ ವೈದ್ಯಾಧಿಕಾರಿಗಳು
5. ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು (ಘತ್ಯಾನಿ).
6. ಎಲ್ಲಾ ವಾರ್ಡ್‌ಗಳ ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಘನತ್ಯಾಜ್ಯ ಇನ್ಸ್‌ಪೆಕ್ಟರ್ಸ್‌ಗಳು ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಅಪಾರ್ಟ್‌ಮೆಂಟ್ಸ್/ಸಂಕೀರ್ಣಗಳು/ಲೇಔಟ್ ಮುಂತಾದ ಫ್ಲಾಟ್ ಓನರ್ಸ್ ಅಸೋಸಿಯೇಷನ್ಸ್‌ರವರಿಗೆ ಮಾಹಿತಿ ನೀಡಲು ಹಾಗೂ ಮುಂಜಾಗ್ರತಾ ಕ್ರಮಗಳನ್ನು ಅನುಷ್ಠಾನ ಗೊಳಿಸಲು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

<u>ಪ್ರತಿಯನ್ನು:</u>

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಡಳಿತ ಪಕ್ಷದ ನಾಯಕರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ವಿರೋಧ ಪಕ್ಷದ ನಾಯಕರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಮಾನ್ಯ ಜೆ.ಡಿ.ಎಸ್ ಪಕ್ಷದ ನಾಯಕರ ಅವಗಾಹನೆಗಾಗಿ ಕಳುಹಿಸಿದೆ.
6. ಮಾನ್ಯ ಅಧ್ಯಕ್ಷರು (ಆರೋಗ್ಯ ಸ್ಥಾಯಿ ಸಮಿತಿ)ರವರ ಅವಗಾಹನೆಗಾಗಿ ಕಳುಹಿಸಿದೆ.
7. ವಿಶೇಷ ಆಯುಕ್ತರು (ಘತ್ಯಾನಿ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
8. ಜಂಟಿ ಆಯುಕ್ತರು (ಘತ್ಯಾನಿ) ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
9. ಮುಖ್ಯ ಅಭಿಯಂತರರು (ಘತ್ಯಾನಿ)ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
10. ಕಛೇರಿ ಕಡತಕ್ಕೆ.

Scanned with CamScanner